KA14030033612012

SIDDANAGOUDAPATIL T

Digitally signed by SIDDANAGOUDAPATIL T
Date: 2026.07.07 16:36:22 +0530

**ಪ್ರಭಾರ 2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿವಮೊಗ್ಗ.**

**ಉಪಸ್ಥಿತರು : ಶ್ರೀ ಸಿದ್ದನಗೌಡ ಪಾಟೀಲ್ ಟಿ., ಬಿ.ಎ.,ಎಲ್‌ಎಲ್.ಎಂ.,**
**1ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶಿವಮೊಗ್ಗ.**

**ದಿನಾಂಕ 6ನೇ ಜುಲೈ 2026**

**ಸಿ.ಸಿ. ನಂಃ 1958/2012**

**ಫಿರ್ಯಾದುದಾರರು:** ಕರ್ನಾಟಕ ಸರ್ಕಾರದ ಪರವಾಗಿ,
ಕುಂಸಿ ಪೊಲೀಸ್ ಠಾಣೆ, ಶಿವಮೊಗ್ಗ.

**(ಇವರ ಪರ ಸಹಾಯಕ ಸರ್ಕಾರಿ ಅಭಿಯೋಜಕರು.)**

**- ವಿರುದ್ಧ -**

**ಆರೋಪಿತರು** :1. ಸುನೀಲ್ ಕುಮಾರ್ ಯಾನೇ ಸುನಿ
ಬಿನ್ ನಾಗರಾಜ್, ಟಿ. 19 ವರ್ಷ, 2ನೇ ಪಿಯುಸಿ ವಿದ್ಯಾರ್ಥಿ,,
ವಾಸಃ 1ನೇ ತಿರುವು, ಜೈಲ್ ಕಾಂಪೌಂಡ್ ಹತ್ತಿರ,
ಮೇದಾರಕೇರಿ, ವಿನೋಬನಗರ, ಶಿವಮೊಗ್ಗ.

2. ರಾಘವೇಂದ್ರ ಬಿನ್ ಸಣ್ಣಮಂಜಪ್ಪ, **(ಮೃತಪಟ್ಟಿರುತ್ತಾರೆ)**
3. ರಾಮ ಬಿನ್ ರಂಗಸ್ವಾಮಿ, **(ಬೇರ್ಪಡಿಸಲಾಗಿದೆ)**
4. ದುರ್ಗಾ ಯಾನೆ ದುರ್ಗಪ್ಪ ಬಿನ್ ಭರ್ಮಪ್ಪ, **(ಬೇರ್ಪಡಿಸಲಾಗಿದೆ)**

**(ಆ1 ಪರ ಶ್ರೀ ಎ.ಬಿ.ಬಿ. ವಕೀಲರು)**

1. ಅಪರಾಧ ನಡೆದ ದಿನಾಂಕ : 04-09-2011

| | | |
|---|---|---|
| 2. ಅಪರಾಧ ವರದಿಯಾದ ದಿನಾಂಕ | : | 04-09-2011 |
| 3. ಪಿರ್ಯಾದುದಾರರ ಹೆಸರು | : | ಎಂ.ಷಣ್ಮುಗಂ, ಪಿ.ಎಸ್.ಐ., |
| 4. ಆರೋಪಿಸಲ್ಪಟ್ಟ ಆರೋಪಗಳು | : | ಭಾರತೀಯ ದಂಡ ಸಂಹಿತೆ ಕಲಂ.392 ಮತ್ತು 414. |
| 5. ವಿಚಾರಣೆ ಪ್ರಾರಂಭವಾದ ದಿನಾಂಕ | : | 14-11-2024 |
| 6. ವಿಚಾರಣೆ ಮುಕ್ತಾಯವಾದ ದಿನಾಂಕ | : | 29-06-2026 |
| 7. ನ್ಯಾಯಾಧೀಶರ ಅಭಿಪ್ರಾಯ | : | 1ನೇ ಆರೋಪಿಯನ್ನು ನಿರ್ದೋಷಿ ಎಂದು ತೀರ್ಮಾನಿಸಲಾಗಿದೆ. |

**ಪ್ರಭಾರ 2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.**

## ತೀರ್ಪು

ಶಿವಮೊಗ್ಗ ಕುಂಸಿ ಪೋಲಿಸ್ ಠಾಣೆಯ ಆರಕ್ಷಕ ನಿರೀಕ್ಷಕರು ಭಾರತೀಯ ದಂಡ ಸಂಹಿತೆ ಕಲಂ.392 ಮತ್ತು 414 ರ ಅಡಿಯಲ್ಲಿ ಶಿಕ್ಷಿಸಬಹುದಾದ ಆರೋಪಗಳ ಮೇಲೆ 1 ರಿಂದ 4ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.**

ದಿಃ22-07-2011 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಚಾಸಾ 7 ಮತ್ತು 8 ರವರು ಕುಂಸಿ ಠಾಣಾ ವ್ಯಾಪ್ತಿಯ ಹಾರನಹಳ್ಳಿ ಚಾಮೇನಹಳ್ಳಿ ರಸ್ತೆಯಲ್ಲಿ ಶನೇಶ್ವರ ದೇವಸ್ಥಾನದ ಕ್ರಾಸ್ ಹತ್ತಿರ ನಡೆದುಕೊಂಡು ಹೋಗುತ್ತಿರುವಾಗ 1 ರಿಂದ 3ನೇ ಆರೋಪಿತರ ಪೈಕಿ 1 ಮತ್ತು

2ನೇ ಆರೋಪಿತರು ಚಾಸಾ 1 ರವರ ಹಿಂದಿನಿಂದ ಬಂದವರೆ ಚಾಸಾ 7 ರವರನ್ನು ಹಿಡಿದುಕೊಂಡು ಅವರ ಕುತ್ತಿಗೆಯಲ್ಲಿದ್ದ ರೂ.16,000/- ಬೆಲೆ ಬಾಳುವ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡಿದ್ದು, ಚಾಸಾ 8 ರವರ ಕೈಯಲ್ಲಿದ್ದ ರೂ.4,000/- ಬೆಲೆ ಬಾಳುವ ನೈಸ್ ಮೊಬೈಲ್ ಹ್ಯಾಂಡ್ ಸೆಟ್ ನೆಲದ ಮೇಲೆ ಬಿದ್ದಾಗ ಅದನ್ನು 1ನೇ ಆರೋಪಿ ತೆಗೆದುಕೊಂಡಿದ್ದು, ನಂತರ ಅವರೆಲ್ಲರೂ ಅಲ್ಲಿಂದ ಓಡಿಹೋಗಿದ್ದು, ನಂತರ 4ನೇ ಆರೋಪಿ ರವರು ಸುಲಿಗೆ ಮಾಡಿದ ಮಾಂಗಲ್ಯ ಸರವನ್ನು ಮಾರಾಟ ಮಾಡಲು ಉಳಿದ ಆರೋಪಿಗಳಿಗೆ ಸಹಕರಿಸಿರುತ್ತಾರೆ ಎಂಬುದಾಗಿರುತ್ತದೆ.

3. ಆರೋಪಿತರಿಗೆ ಸಮನ್ಸ್ ಜಾರಿ ಮಾಡಲಾಗಿ ಆರೋಪಿತರು ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನು ಅರ್ಜಿ ಸಲ್ಲಿಸಿದ್ದು ಜಾಮೀನು ಅರ್ಜಿಯು ಪುರಸ್ಕಾರಗೊಂಡು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

4. ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 207ರ ಅಡಿಯಲ್ಲಿ ಆರೋಪಿತರಿಗೆ ದೋಷಾರೋಪಣಾ ಪತ್ರದ ಪ್ರತಿಯನ್ನು ನೀಡಲಾಗಿದೆ.

5. ಆರೋಪಿತರ ವಿರುದ್ಧ ಮುಂದುವರೆಯಲು ಸಾಕಷ್ಟು ಕಾರಣಗಳು ಕಂಡು ಬಂದ ಕಾರಣ ಆರೋಪಿತರಿಗೆ ಭಾರತೀಯ ದಂಡ ಸಂಹಿತೆ ಕಲಂ.392 ಮತ್ತು 414 ರ ಅಪರಾಧಗಳಿಗೆ ಆರೋಪಗಳನ್ನು ರಚಿಸಿ ಓದಿ ಹೇಳಲಾಗಿ, ಅವರು ಆರೋಪಗಳನ್ನು ನಿರಾಕರಿಸಿ, ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ. ಈ ಸಮಯದಲ್ಲಿ 2ನೇ ಆರೋಪಿಯು ಮೃತಪಟ್ಟಿದ್ದು ಅವರ ವಿರುದ್ಧ ಪ್ರಕರಣವನ್ನು ಕೈಬಿಡಲಾಗಿದೆ. 3 ಮತ್ತು 4ನೇ ಆರೋಪಿತರನ್ನು ಈ ಪ್ರಕರಣದಿಂದ ಬೇರ್ಪಡಿಸಲಾಗಿದೆ.

6. ಆರೋಪಿತರ ಮೇಲಿನ ಆರೋಪಗಳನ್ನು ಸಾಬೀತುಪಡಿಸಲು ಅಭಿಯೋಜನೆಯು ದೋಷಾರೋಪಣ ಪಟ್ಟಿಯಲ್ಲಿ ಒಟ್ಟು 14 ಜನ ಸಾಕ್ಷಿದಾರರನ್ನು ಗುರುತಿಸಿದ್ದು, 10 ಸಾಕ್ಷಿದಾರರನ್ನು ಪ್ರಾಸಾ1 ರಿಂದ 10 ಎಂದು ವಿಚಾರಣೆಗೆ ಒಳಪಡಿಸಿದ್ದು, ಒಟ್ಟು 8 ದಾಖಲೆಗಳನ್ನು ನಿಪಿ1 ರಿಂದ 8 ಎಂದು ಗುರುತಿಸಿಕೊಂಡು, ಅಭಿಯೋಜನೆಯ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ.

7. ಸದರಿ ಪ್ರಕರಣದಲ್ಲಿ ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ 1ನೇ ಆರೋಪಿಗೆ ಅಭಿಯೋಜನೆ ಸಾಕ್ಷಿಯನ್ನು ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು. ಆರೋಪಿ ತಮ್ಮ ವಿರುದ್ಧ ಇರುವ ಅಭಿಯೋಜನೆ ಸಾಕ್ಷ್ಯಗಳ ಸನ್ನಿವೇಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ತಮ್ಮ ಪ್ರತಿ ರಕ್ಷಣೆ ಪರವಾಗಿ ಯಾವುದೇ ಸಾಕ್ಷಿಯನ್ನು ಅಥವಾ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

8. ಉಭಯ ಪಕ್ಷಕಾರರ ವಕೀಲರುಗಳ ವಾದ ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆಃ

1. ದಿಃ22-07-2011 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಚಾಸಾ 7 ಮತ್ತು 8 ರವರು ಕುಂಸಿ ಠಾಣಾ ವ್ಯಾಪ್ತಿಯ ಹಾರನಹಳ್ಳಿ ಚಾಮೇನಹಳ್ಳಿ ರಸ್ತೆಯಲ್ಲಿ ಶನೇಶ್ವರ ದೇವಸ್ಥಾನದ ಕ್ರಾಸ್ ಹತ್ತಿರ ನಡೆದುಕೊಂಡು ಹೋಗುತ್ತಿರುವಾಗ 1 ರಿಂದ 3ನೇ ಆರೋಪಿತರ ಪೈಕಿ 1 ಮತ್ತು 2ನೇ ಆರೋಪಿತರು ಚಾಸಾ 1 ರವರ ಹಿಂದಿನಿಂದ ಬಂದು ಚಾಸಾ 7 ರವರನ್ನು ಹಿಡಿದುಕೊಂಡು ಅವರ ಕುತ್ತಿಗೆಯಲ್ಲಿದ್ದ ರೂ.16,000/- ಬೆಲೆ ಬಾಳುವ

ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು, ದರೋಡೆ ಮಾಡಿ ನಂತರ 3ನೇ ಆರೋಪಿ ಮುಖಾಂತರ ಚಾಸಾ 3 ರವರಿಗೆ ರೂ.60,000/- ಗಳಿಗೆ ಮಾರಾಟ ಮಾಡಿ, ಚಾಸಾ 8 ರವರ ಕೈಯಲ್ಲಿದ್ದ ರೂ.4,000/- ಬೆಲೆ ಬಾಳುವ ಸ್ಪೈಸ್ ಮೊಬೈಲ್ ಹ್ಯಾಂಡ್ ಸೆಟ್ ನೆಲದ ಮೇಲೆ ಬಿದ್ದಾಗ ಅದನ್ನು 1ನೇ ಆರೋಪಿ ತೆಗೆದುಕೊಂಡಿದ್ದು, ನಂತರ ಎಲ್ಲರೂ ಅಲ್ಲಿಂದ ಓಡಿಹೋಗಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.392ರ ಅಡಿಯಲ್ಲಿ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

2. ಯಾವ ಆದೇಶ?

9. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆಃ

ಅಂಶ 1 : ನಕಾರಾತ್ಮಕವಾಗಿ,
ಅಂಶ 2 : ಅಂತಿಮ ಆದೇಶದಂತೆ,
ಕೆಳಕಂಡ ಕಾರಣಗಳಿಗಾಗಿಃ

**ಕಾ ರ ಣ ಗ ಳು**

10. **ಅಂಶ-1**: ಈ ಪ್ರಕರಣದಲ್ಲಿ ಅಭಿಯೋಜನೆಯು, ಆರೋಪಿತರ ವಿರುದ್ಧ ಪ್ರಮುಖವಾಗಿ ಆಪಾದಿಸುವುದೇನೆಂದರೆ, ದಿಃ22-07-2011 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಚಾಸಾ 7 ಮತ್ತು 8 ರವರು ಕುಂಸಿಯ ಹಾರನಹಳ್ಳಿ ಚಾಮೇನಹಳ್ಳಿ ರಸ್ತೆಯಲ್ಲಿ ಶನೇಶ್ವರ ದೇವಸ್ಥಾನದ ಕ್ರಾಸ್ ಹತ್ತಿರ ನಡೆದುಕೊಂಡು ಹೋಗುತ್ತಿರುವಾಗ 1 ರಿಂದ 3ನೇ ಆರೋಪಿತರ ಪೈಕಿ 1 ಮತ್ತು 2ನೇ ಆರೋಪಿತರು ಚಾಸಾ 1 ರವರ ಹಿಂದಿನಿಂದ ಬಂದವರೆ ಚಾಸಾ 7 ರವರನ್ನು ಹಿಡಿದುಕೊಂಡು ಅವರ ಕುತ್ತಿಗೆಯಲ್ಲಿದ್ದ ರೂ.16,000/- ಬೆಲೆ ಬಾಳುವ

ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡಿದ್ದು, ಚಾಸಾ 8 ರವರ ಕೈಯಲ್ಲಿದ್ದ ರೂ.4,000/- ಬೆಲೆ ಬಾಳುವ ಸ್ಪೈಸ್ ಮೊಬೈಲ್ ಹ್ಯಾಂಡ್ ಸೆಟ್ ನೆಲದ ಮೇಲೆ ಬಿದ್ದಾಗ ಅದನ್ನು 1ನೇ ಆರೋಪಿ ತೆಗೆದುಕೊಂಡಿದ್ದು, ನಂತರ ಅವರೆಲ್ಲರೂ ಅಲ್ಲಿಂದ ಓಡಿಹೋಗಿದ್ದು, ನಂತರ 4ನೇ ಆರೋಪಿ ರವರು ಸುಲಿಗೆ ಮಾಡಿದ ಮಾಂಗಲ್ಯ ಸರವನ್ನು ಮಾರಾಟ ಮಾಡಲು ಉಳಿದ ಆರೋಪಿಗಳಿಗೆ ಸಹಕರಿಸಿರುತ್ತಾರೆ ಎಂಬುದಾಗಿರುತ್ತದೆ.

11. ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ಸಾಬೀತುಪಡಿಸಲು ಅಭಿಯೋಜನೆಯು ಫಿರ್ಯಾದುದಾರರಾದ ಪ್ರಾಸಾ4 ರವರನ್ನು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ04-09-2011 ರಂದು ತಾನು ಕರ್ತವ್ಯದಲ್ಲಿದ್ದಾಗ ಕುಂಸಿ ಗ್ರಾಮದ ಗಣೇಶ್ ಜ್ಯೂವೆಲ್ಲರ್ ನಲ್ಲಿ ಚಿನ್ನ ಮಾರಾಟ ಮಾಡಲು ಬಂದಿದ್ದ ಒಬ್ಬ ವ್ಯಕ್ತಿಯ ಬಗ್ಗೆ ಅನುಮಾನ ಇದೆ ಎಂದು ಮಾಹಿತಿ ಬಂದಿದ್ದು, ನಂತರ ಠಾಣಾ ಸಿಬ್ಬಂದಿ ಚಂದ್ರಶೇಖರ್ ರವರ ಮುಖಾಂತರ ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆದುಕುಂಡು ಗಣೇಶ್ ಜ್ಯೂವೆಲ್ಲರ್ಸ್ ಗೆ ಹೋದಾಗ ಅಲ್ಲಿ 20 ವರ್ಷದ ಒಬ್ಬ ವ್ಯಕ್ತಿ ಇದ್ದು, ಆತನನ್ನು ವಿಚಾರಣೆ ಮಾಡಿದಾಗ ಆತನ ಹೆಸರು ಸುನೀಲ್ ಎಂದು ತಿಳಿದು ಬಂದಿದ್ದು, ಆತನ ಬಳಿ ತುಂಡಾದ ಚಿನ್ನದ ಸರ ಮತ್ತು ನೈಸ್ ಕಂಪನಿ ಮೊಬೈಲ್ ಇದ್ದು, ವಿಚಾರಿಸಲಾಗಿ ಆತ ಸಮಂಜಸ ಉತರ ನೀಡಿದೇ ಇದ್ದು, ನಂತರ ಪಂಚರ ಸಮಕ್ಷಮ ಮಹಜರ್ ಜರುಗಿಸಿ ತುಂಡಾದ 11 ಇಂಚಿನ ಚಿನ್ನದ ಸರ ಹಾಗೂ ಮೊಬೈಲ್ ಅನ್ನು ಅಮಾನತ್ತುಪಡಿಸಿಕೊಂಡು, ನಂತರ ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು ಠಾಣೆಗೆ ವಾಪಾಸಾಗಿ ಸ್ವ ದೂರಿನ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿ ದಾಖಲು ಮಾಡಿ, ನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆ ಪಡೆದುಕೊಂಡು, ಆರೋಪಿಯು

ಹಾರನಹಳ್ಳಿ ಕುಂಸಿ ರಸ್ತೆಯ ನಡುವಿನಲ್ಲಿ ಚಿನ್ನದ ಸರವನ್ನು ಮಹಿಳೆ ಕುತ್ತಿಗೆಯಿಂದ ಕಿತ್ತುಕೊಂಡಿರುವುದಾಗಿ ತಿಳಿಸಿದ್ದು, ನಂತರ ಆರೋಪಿ ತೋರಿಸಿದ ಸ್ಥಳಕ್ಕೆ ಹೋಗಿ ಚಾಸಾ2 ಮತ್ತು 3 ರವರ ಸಮಕ್ಷಮ ಸ್ಥಳ ಮಹಜರ್ ಜರುಗಿಸಿ, ಆರೋಪಿಯನ್ನು ಸಿಬ್ಬಂದಿ ಮುಖಾಂತರ ನ್ಯಾಯಾಲಯಕ್ಕೆ ಹಾಜರುಪಡಿಸಿ, ನಂತರ ಕಡತವನ್ನು ಪರಿಶೀಲಿಸಿ ಕಲಂ 392 ಭಾರತೀಯ ದಂಡ ಸಂಹಿತೆ ಕಲಂ ಅನ್ನು ಅಳವಡಿಸಿಕೊಳ್ಳಲು ನ್ಯಾಯಾಲಯದ ಅನುಮತಿ ಕೋರಿದ್ದು, ನಂತರ ಚಾಸಾ 6 ರವರ ಹೇಳಿಕೆ ಪಡೆದುಕೊಂಡು, ನಂತರ ಮುಂದಿನ ತನಿಖೆಗಾಗಿ ಚಾಸಾ 16 ರವರಿಗೆ ಕಡತವನ್ನು ಹಸ್ತಾಂತರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ.

12. ಪ್ರಾಸಾ 1 ರವರು ಈ ಪ್ರಕರಣದಲ್ಲಿ ಸುಲಿಗೆ ಮಾಡಿದ ಬಂಗಾರದ ಮಾಂಗಲ್ಯ ಸರ ಗುರ್ತಿಸಿದ ಬಗ್ಗೆ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸುಮಾರು 12 ವರ್ಷಗಳ ಹಿಂದೆ ತಾವು ಭದ್ರಾವತಿಯಲ್ಲಿ ವಾಸವಾಗಿದ್ದು, ಮಗಳನ್ನು ಅವಳ ಗಂಡನ ಮನೆಗೆ ಬಿಟ್ಟು ಬರಲು ಚಾಮೇನಹಳ್ಳಿಗೆ ಹೋಗುತ್ತಿದ್ದು, ಹಾರನಹಳ್ಳಿಯಿಂದ ಚಾಮೇನಹಳ್ಳಿಗೆ ನಡೆದುಕೊಂಡು ಹೋಗುತ್ತಿದ್ದಾಗ ಅಲ್ಲಿ ಶನಿದೇವರ ದೇವಾಲಯವಿದ್ದು, ಸದರಿ ದೇವಸ್ಥಾನವನ್ನು ದಾಟಿ ಮುಂದಕ್ಕೆ ಹೋದ ನಂತರ ಮೂರು ಜನರು ಬಂದು ತನ್ನ ಬಾಯಿಮುಚ್ಚಿ ತನ್ನ ಸರ ಕಿತ್ತುಕೊಂಡು, ತನ್ನ ಮಗಳ ಕೈಯಲ್ಲಿದ್ದ ಫೋನ್ ಅನ್ನು ಕಿತ್ತುಕೊಂಡಿದ್ದು, ನಂತರ ತಾವು ಮನೆಗೆ ಹೋಗಿ ತನ್ನ ಅಳಿಯನಿಗೆ ತಿಳಿಸಿ ನಂತರ ಕುಂಸಿ ಠಾಣೆಗೆ ಹೋಗಿ ದೂರು ನೀಡಿದ್ದು, ನಂತರ ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದ್ದು, ಸುಮಾರು 2 ತಿಂಗಳ ನಂತರ ಕುಂಸಿ ಪೋಲಿಸರು ಕರೆ ಮಾಡಿ ಠಾಣೆಗೆ ಬನ್ನಿ ಎಂದು ಹೇಳಿದ್ದು, ತಾವು ಶಿವಮಾಗ್ಗ ಪೊಲೀಸ್ ಠಾಣೆಗೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿಯನ್ನು ಅರೆಸ್ಟ್ ಮಾಡಿದ್ದು, ಆತನನ್ನು ನೋಡಿ ಗುರುತಿಸಿದ್ದು,

ನಂತರ ಪೋಲಿಸರು ತಮ್ಮ ಒಡವೆಯನ್ನು ಕೊಟ್ಟಿದ್ದು, ಆ ಸಮಯದಲ್ಲಿ ಮಹಜರ್ ಮಾಡಿದ್ದು, ತಾನು ಪೋಲಿಸರಿಗೆ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ.

13. ಪ್ರಾಸಾ1 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ನನಗೆ ಈಗ ಆರೋಪಿಯನ್ನು ನೋಡಿದ್ದಲ್ಲಿ ಗುರುತಿಸಲು ಸಾಧ್ಯವಿಲ್ಲ. ನಾನು ಮಹಜರ್ ಗೆ ಸಹಿ ಮಾಡಿರುತ್ತೆನೋ ಇಲ್ಲವೋ ನೆನಪಿಲ್ಲ ಎಂದು ನುಡಿದಿರುತ್ತಾರೆ.

14. ಪ್ರಾಸಾ 2 ರವರು ಈ ಪ್ರಕರಣದಲ್ಲಿ ಸುಲಿಗೆ ಮಾಡಿದ ಬಂಗಾರದ ಮಾಂಗಲ್ಯ ಸರ ಗುರ್ತಿಸಿದ ಬಗ್ಗೆ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2011 ರ ಜುಲೈ 4 ರಂದು ಸಂಜೆ 5 ಗಂಟೆಗೆ ತಮ್ಮ ಊರಿಗೆ ಹೋಗುವ ನೇರವಾದ ಬಸ್ಸು ತಪ್ಪಿ ಹೋಗಿದ್ದು, ನಂತರ ಮತ್ತೊಂದು ಬಸ್ಸು ಹಾರನಹಳ್ಳಿ ವರೆಗೆ ಮಾತ್ರ ಹೋಗಿದ್ದು, ಅಲ್ಲಿ ಬೆಳಕು ಇದ್ದ ಕಾರಣ ತಾವು ಚಾಮೇನಹಳ್ಳಿಗೆ ನಡೆದುಕೊಂಡು ಹೋಗುತ್ತಿದ್ದಾಗ, ಅಲ್ಲಿ ಶನೀಶ್ವರ ದೇವಸ್ಥಾನದ ಕ್ರಾಸ್ ಬಳಿ ಮೂರು ಜನ ನಿಂತಿದ್ದು, ತಾವು ಮುಂದೆ ಹೋಗುತ್ತಿದ್ದಾಗ ಅವರು ತನ್ನ ತಾಯಿ ಚಾಸಾ 7 ರವರ ಬಾಯಿ ಮುಚ್ಚಿ ಅವರ ಸರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದು, ಅರ್ಧ ಚೈನ್ ಕಿತ್ತುಕೊಂಡಿದ್ದು, ನಂತರ ತನ್ನ ಚೈನ್ ಕಿತ್ತುಕೊಳ್ಳಲು ಬಂದಿದ್ದು, ಆಗ ತಾವು ಕೂಗಿಕೊಂಡಿದ್ದರಿಂದ, ಊರು ಹತ್ತಿರ ಇದ್ದಿದ್ದರಿಂದ ಅವರು ಹೆದರಿದ್ದು, ತಾನು ಫೋನ್ ಅನ್ನು ತೆಗೆದುಕೊಂಡಾಗ ಫೋನ್ ಕಿತ್ತುಕೊಂಡು ಅವರು ಓಡಿ ಹೋಗಿದ್ದಾಗಿ, ನಂತರ ತನ್ನ ಗಂಡನನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಬಂದು ಅರ್ಧ ಚೈನು ಅನ್ನು ಹುಡುಕಿದ್ದು, ಅದು ಸಿಕ್ಕಿರುವುದಿಲ್ಲವಾದ್ದರಿಂದ ಕುಂಸಿ ಠಾಣೆಗೆ ಹೋಗಿ ಚಾಸಾ 9 ರವರು ದೂರು ನೀಡಿದ್ದು, ನಂತರ 2-3 ತಿಂಗಳ ನಂತರ ಚಾಸಾ 1 ರವರು ಫೋನ್ ಮತ್ತು ಒಡವೆ ಸಿಕ್ಕಿದೆ ಎಂದು ಹೇಳಿದ್ದು, ತಾನು ಹಾಗೂ ಚಾಸಾ 7 ರವರು

ಠಾಣೆಗೆ ಹೋಗಿ ಒಡವೆಗಳನ್ನು ಬಿಡಿಸಿಕೊಂಡು ಬಂದಿದ್ದು, ಕುಂಸಿ ಠಾಣೆಯಲ್ಲಿ ಒಬ್ಬ ಆರೋಪಿಯನ್ನು ಬಂಧಿಸಿದ್ದು, ತುಂಬಾ ವರ್ಷಗಳು ಆಗಿದ್ದರಿಂದ ಆರೋಪಿತರನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ, ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದಾಗಿ, ನಂತರ ದಿ:06.09.2011 ರಂದು ಪೊಲೀಸರು ಪಂಚರ ಸಮಕ್ಷಮ ಸ್ಥಳ ಮಹಜರ್ ಮಾಡಿದ್ದು, ಆ ಸಮಯದಲ್ಲಿ ತಾನು ಮಹಜರ್ ಗೆ ಸಹಿ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ.

15. ಪ್ರಾಸಾ 2 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಈ ಪ್ರಕರಣದಲ್ಲಿ ದೂರನ್ನು ನಾನು ನೀಡಿರುವುದಿಲ್ಲ. ಸ್ಥಳ ಪಂಚನಾಮೆ ನಾನು ಓದಿ ಸಹಿ ಮಾಡಿರುತ್ತೇನೆ. ಆರೋಪಿತರನ್ನು ಗುರುತಿಸಲು ನನಗೆ ಆಗುವುದಿಲ್ಲ ಎಂದು ನುಡಿಯುತ್ತಾರೆ.

16. ಪ್ರಾಸಾ 3 ರವರು ಈ ಪ್ರಕರಣದಲ್ಲಿ ಸುಲಿಗೆ ಮಾಡಿದ ಬಂಗಾರದ ಮಾಂಗಲ್ಯ ಸರ ಗುರ್ತಿಸಿದ ಬಗ್ಗೆ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2011 ರ ಜುಲೈ ತಿಂಗಳಿನಲ್ಲಿ ತನ್ನ ಅತ್ತೆ ಚಾಸಾ 7 ಹಾಗೂ ತನ್ನ ಪತ್ನಿ ಚಾಸಾ 8 ರವರು ಭದ್ರಾವತಿಯಿಂದ ತಮ್ಮ ಮನೆ ಚಾಮೇನಹಳ್ಳಿಗೆ ಬರುತ್ತಿದ್ದಾಗ, ದಾರಿ ಮಧ್ಯೆ ಇರುವ ಶನೀಶ್ವರ ದೇವಾಲಯದ ಬಳಿ ತನ್ನ ಅತ್ತೆಯ ಚೈನ್ ಹಾಗೂ ತನ್ನ ಹೆಂಡತಿ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡಿರುತ್ತಾರೆ ಎಂದು ತನಗೆ ತನ್ನ ಹೆಂಡತಿ ಹಾಗೂ ಅತ್ತೆ ಹೇಳಿದ್ದು, ನಂತರ ಅವರನ್ನು ಕುಂಸಿ ಠಾಣೆಗೆ ಕರೆದುಕೊಂಡು ಹೋಗಿ ತಾನು ದೂರನ್ನು ನೀಡಿದ್ದು, ನಂತರ ಪೋಲಿಸರು ಬಂದು ಸ್ಥಳ ಪರಿಶೀಲನೆ ಮಾಡಿದ್ದು, ಎರಡು ತಿಂಗಳ ನಂತರ ಪೋಲಿಸರು ಪೋನ್ ಮಾಡಿ ಕಳ್ಳ ಸಿಕ್ಕಿರುತ್ತಾನೆ ಎಂದು ತಿಳಿಸಿದ್ದು, ತಾನು ಹಾಗೂ ಚಾಸಾ 8 ರವರು ಹೋಗಿದ್ದು, ನಂತರ ಚಾಸಾ 7 ರವರನ್ನು ಕರೆಸಿದ್ದು, ಪೋಲಿಸರು

ಚೈನ್ ತೋರಿಸಿದ್ದು, ಚಾಸಾ 7 ಹಾಗೂ 8 ರವರು ಅದನ್ನು ಗುರುತಿಸಿದ್ದು, ಆ ಸಮಯದಲ್ಲಿ ಬಂಧಿಸಲಾಗಿದ್ದ ಆರೋಪಿಯನ್ನು ನೋಡಿ ಗುರುತಿಸಿದ್ದಾಗಿ, ನಂತರ ಸದರಿ ಆರೋಪಿಯನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದು ಮಹಜರ್ ಮಾಡಿದ್ದು, ಈ ವಿಚಾರವಾಗಿ ತಾನು ಪೋಲಿಸರಿಗೆ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ.

17. ಪ್ರಾಸಾ 3 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಘಟನಾ ಸ್ಥಳದಲ್ಲಿ ತಾನು ಇರಲಿಲ್ಲ, ಘಟನಾ ಸಮಯದಲ್ಲಿ ತಾನು ಮನೆಯಲ್ಲಿ ಇದ್ದೆನು ಎಂದು ಒಪ್ಪಿಕೊಂಡಿರುತ್ತಾರೆ.

18. ಪ್ರಾಸಾ 5 ಈ ಪ್ರಕರಣದ ಇಲಾಖಾ ಸಾಕ್ಷಿದಾರರಾಗಿದ್ದು, 1ನೇ ಆರೋಪಿಯನ್ನು ಹಿಡಿಯಲು ಸಹಕರಿಸಿದ ಬಗ್ಗೆ ನುಡಿದಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:04.09.2011 ರಂದು ಮಧ್ಯಾಹ್ನ 2.40 ಗಂಟೆಗೆ ಚಾಸಾ 1 ರವರು ತಮ್ಮನ್ನು ಕುಂಸಿ ಬಸ್ ನಿಲ್ದಾಣದ ಬಳಿ ಬರಲು ತಿಳಿಸಿದ್ದು, ಗಣೇಶ್ ಜ್ಯೂವೆಲ್ಲರ್ ನಲ್ಲಿ ಒಬ್ಬ ವ್ಯಕ್ತಿ ಅನುಮಾನಸ್ಪದವಾಗಿ ನಿಂತಿದ್ದು, ಆತನು ಯಾವುದೋ ಒಡವೆಯನ್ನು ಮಾರಾಟ ಮಾಡಲು ತಂದಿರುವ ಬಗ್ಗೆ ಸಂಶಯ ಇದೆ ಎಂದು ಚಾಸಾ 1 ರವರಿಗೆ ಬಂದ ಮಾಹಿತಿ ಮೇರೆಗೆ ಚಾಸಾ 1 ರವರೊಂದಿಗೆ ಪಂಚರಾದ ಚಾಸಾ2 ಹಾಗೂ 3 ರವರ ಸಮಕ್ಷಮ ಗಣೇಶ್ ಜ್ಯೂವೆಲ್ಲರ್ ಮುಂಭಾಗ ನಿಂತಿದ್ದ ವ್ಯಕ್ತಿಯನ್ನು ವಿಚಾರಣೆ ಮಾಡಲಾಗಿ ಆತನು ಸಮಂಜಸ ಉತ್ತರ ನೀಡದೇ ಇದ್ದು, ಆತನ ಕೈಯಲ್ಲಿ ಸುತ್ತಿದ ಪೇಪರ್ ನಲ್ಲಿ ಏನೋ ಇಟ್ಟುಕೊಂಡಿದ್ದು, ಅದರ ಬಗ್ಗೆ ಕೇಳಿದಾಗ ಆತನು ಸರಿಯಾದ ಉತ್ತರ ನೀಡಿದೇ ಇದ್ದಾಗ, ಚಾಸಾ 1, ತಾನು ಹಾಗೂ ಚಾಸಾ 10 ಹಾಗೂ ಚಾಸಾ 11 ರವರು ಪಂಚರ ಸಮಕ್ಷಮದಲ್ಲಿ ಆತನನ್ನು ಹಿಡಿದುಕೊಂಡು ಪರಿಶೀಲನೆ

ಮಾಡಿ ಆತನಿಂದ 11 ಇಂಚು ತುಂಡಾದ ಸರ ಮತ್ತು ಸೈಸ್ ಕಂಪನಿ ಮೊಬೈಲ್ ಸಿಕ್ಕಿದ್ದು, ಅದನ್ನು ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡು, ಠಾಣೆಗೆ ಕರೆದುಕೊಂಡು ಬಂದು ಪ್ರಕರಣ ದಾಖಲು ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ.

19. ಪ್ರಾಸಾ 6 ರವರು ಈ ಪ್ರಕರಣದಲ್ಲಿನ ಕೃತ್ಯದ ವಿಚಾರ ತಿಳಿದ ಬಗ್ಗೆ ಹೇಳಿಕೆಯಲ್ಲಿ ಕಂಡಂತೆ ನುಡಿದಿದ್ದು, ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ತಾನು ಯಾವುದೇ ಘಟನೆ ನೋಡಿರುವುದಿಲ್ಲ, ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

20. ಪ್ರಾಸಾ 7 ಈ ಪ್ರಕರಣದ ಇಲಾಖಾ ಸಾಕ್ಷಿದಾರರಾಗಿದ್ದು, 3ನೇ ಆರೋಪಿಯನ್ನು ಹಿಡಿಯಲು ಸಹಕರಿಸಿದ ಬಗ್ಗೆ ನುಡಿದಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು ಹಾಗೂ ಚಾಸಾ 10 ರವರು ಶಿವಮೊಗ್ಗ ಬಸ್ ನಿಲ್ದಾಣ ಹಾಗೂ ಮುಂತಾದ ಕಡೆ 3ನೇ ಆರೋಪಿಯನ್ನು ಪತ್ತೆ ಮಾಡುತ್ತಿರುವಾಗ ಬಾತ್ಮೀದಾರರಿಂದ ಮಾಹಿತಿ ಬಂದ ಮೇರೆಗೆ ಶಿವಮೊಗ್ಗದ ಗಾರ್ಡನ್ ಏರಿಯಾದ ದುರ್ಗಮ್ಮ ದೇವಾಲಯದ ಹತ್ತಿರ ಬಾಡಿಗೆ ಮನೆಯಲ್ಲಿ ರಾಮು ಅಂತರಗಂಗೆ ವಾಸಿಯಾದ ರಾಮು ಇರುವುದಾಗಿ ಖಚಿತ ಮಾಹಿತಿ ಮೇರೆಗೆ ತಾವು ಹೋಗಿ ನೋಡಲಾಗಿ ಸದರಿ ಆಸಾಮಿ ಬಾಡಿಗೆ ಮನೆ ಮುಂಭಾಗದಲ್ಲಿ ನಿಂತಿದ್ದು, ಆತನನ್ನು ಹಿಡಿದು, ಮೇಲೆ ಹೇಳಿದ ಗುನ್ನೆಯಲ್ಲಿ 3ನೇ ಆರೋಪಿ ಎಂದು ಖಚಿತಪಡಿಸಿಕೊಂಡು ವಶಕ್ಕೆ ಪಡೆದು ತಾವು ಚಾಸಾ 14 ರವರ ಮುಂದೆ ಹಾಜರುಪಡಿಸಿರುತ್ತೇವೆ.

21. ಪ್ರಾಸಾ 8 ರವರು ಈ ಪ್ರಕರಣದ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನನ್ನು ಪೋಲಿಸರು ಪಂಚನಾಗುವಂತೆ ಕೇಳಿಕೊಂಡಿಲ್ಲ. ತನ್ನ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ, ಮಹಜರಿನಲ್ಲಿ ಏನೂ ಬರೆದಿದೆ ತನಗೆ ಗೊತ್ತಿಲ್ಲ. ಮಹಜರಿನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸುಮಾರು 15 ವರ್ಷಗಳ ಹಿಂದೆ ತಮ್ಮ ಊರಿನ ಶನೀಶ್ವರ ಸ್ವಾಮಿ ದೇವಾಲಯದ ದಾರಿಯಲ್ಲಿ ತೋಟದಿಂದ ಮನೆಗೆ ಬರುವಾಗ ಅಲ್ಲಿ ಜನರು ನಿಂತಿದ್ದು, ಪೋಲಿಸರು ತನ್ನ ಸಹಿ ಪಡೆದಿದ್ದು, ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ, ತನ್ನ ಜೊತೆ ಚಾಸಾ 5 ರವರು ಸಹ ಇದ್ದರು ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

22. ಪ್ರಾಸಾ 8 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಕೂಡ ಅಭಿಯೋಜನೆಗೆ ಸಹಕಾರಿಯಾಗುವ ಯಾವುದೇ ಅಂಶಗಳನ್ನು ಹೊರತರುವಲ್ಲಿ ವಿಫಲವಾಗಿರುತ್ತದೆ.ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ನಿಪಿ 1 ಪಂಚನಾಮೆಯ ಅಂಶಗಳ ಬಗ್ಗೆ ತನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ್ದರಿಂದ ಮಾತ್ರ ಸಹಿ ಮಾಡಿರುತ್ತೇನೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ.

23. ಪ್ರಾಸಾ 9 ಮತ್ತು 10 ರವರು ಈ ಪ್ರಕರಣದ ಅಮಾನತ್ತು ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಮ್ಮನ್ನು ಪೊಲೀಸರು ಪಂಚನಾಗುವಂತೆ ಕೇಳಿಕೊಂಡಿಲ್ಲ. ತಮ್ಮ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ, ಮಹಜರಿನಲ್ಲಿ ಏನು ಬರೆದಿದೆ ತನಗೆ ಗೊತ್ತಿಲ್ಲ. ತಮ್ಮ ಸಮಕ್ಷಮ ಯಾವುದೇ ದಾಖಲಾತಿಗಳನ್ನು ವಶಪಡಿಸಿಕೊಂಡಿಲ್ಲ. ನಿಪಿ2 ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ

ಗುರುತಿಸಿದ್ದು, ತಾವು ಸದರಿ ಸಹಿಯನ್ನು ಕುಂಸಿ ಬಸ್ ನಿಲ್ದಾಣದ ಬಳಿ ಮಾಡಿದ್ದು, ಯಾವ ಕಾರಣಕ್ಕಾಗಿ ಸಹಿಯನ್ನು ಪಡೆದುಕೊಂಡಿರುತ್ತಾರೆ ತಮಗೆ ಗೊತ್ತಿಲ್ಲ, ಪೋಲಿಸರು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

24. ಪ್ರಾಸಾ 9 ಮತ್ತು 10 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನೆಗೆ ಸಹಕಾರಿಯಾಗುವ ಅಂಶಗಳನ್ನು ಹೊರತರುವಲ್ಲಿ ವಿಫಲವಾಗಿರುತ್ತಾರೆ.

25. ಈ ಪ್ರಕರಣದಲ್ಲಿ ಅಭಿಯೋಜನೆಯು ದಿಃ22-07-2011 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಚಾಸಾ 7 ಮತ್ತು 8 ರವರು ಕುಂಸಿ ಠಾಣಾ ವ್ಯಾಪ್ತಿಯ ಹಾರನಹಳ್ಳಿ ಚಾಮೇನಹಳ್ಳಿ ರಸ್ತೆಯಲ್ಲಿ ಶನೇಶ್ವರ ದೇವಸ್ಥಾನದ ಕ್ರಾಸ್ ಹತ್ತಿರ ನಡೆದುಕೊಂಡು ಹೋಗುತ್ತಿರುವಾಗ ಪೈಕಿ 1 ಮತ್ತು 2ನೇ ಆರೋಪಿತರು ಚಾಸಾ 1 ರವರ ಹಿಂದಿನಿಂದ ಬಂದು ಚಾಸಾ 7 ರವರ ಕುತ್ತಿಗೆಯಲ್ಲಿದ್ದ ರೂ.16,000/- ಬೆಲೆ ಬಾಳುವ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು, ಚಾಸಾ 8 ರವರ ಕೈಯಲ್ಲಿದ್ದ ರೂ.4,000/- ಬೆಲೆ ಬಾಳುವ ನೈಸ್ ಮೊಬೈಲ್ ಹ್ಯಾಂಡ್ ಸೆಟ್ ಅನ್ನು 1ನೇ ಆರೋಪಿ ತೆಗೆದುಕೊಂಡು ಎಲ್ಲರೂ ಅಲ್ಲಿಂದ ಓಡಿಹೋಗಿದ್ದು, ನಂತರ 4ನೇ ಆರೋಪಿ ರವರು ಸುಲಿಗೆ ಮಾಡಿದ ಮಾಂಗಲ್ಯ ಸರವನ್ನು ಮಾರಾಟ ಮಾಡಲು ಉಳಿದ ಆರೋಪಿಗಳಿಗೆ ಸಹಕರಿಸಿರುತ್ತಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ.

26. ಪ್ರಾಸಾ.1 ರಿಂದ ಪ್ರಾಸಾ.10 ರವರ ಸಾಕ್ಷ್ಯವನ್ನು ಮತ್ತು ನಿಪಿ.1 ರಿಂದ 8ರ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನೋಡಲಾಗಿ, ಪ್ರಾಸಾ 1 ಮತ್ತು 2 ರವರು ಸಂತ್ರಸ್ತ ಸಾಕ್ಷಿದಾರರಾಗಿದ್ದು, ತಾವು ಆರೋಪಿಯನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ ಎಂದು ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ನುಡಿದಿದ್ದು, ಪ್ರಾಸಾ 3 ರವರು ಪ್ರಾಸಾ 1 ರವರ ಅಳಿಯನಾಗಿದ್ದು ಆತ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದು ಸಹ ಒಪ್ಪಿಕೊಂಡಿರುತ್ತಾರೆ ಮತ್ತು ತನಿಖಾಧಿಕಾರಿ ಈ ಪ್ರಕರಣದಲ್ಲಿ ಆರೋಪಿತರು ಸಿಕ್ಕ ನಂತರ ಘಟನೆಯ ಸಂತ್ರಸ್ತರನ್ನು ಕರೆಸಿ ಗುರುತು ಪತ್ತೆ ಹಚ್ಚುವ ಕವಾಯತು ನಡೆಸದೇ ಇರುವುದು ಅಭಿಯೋಜನೆ ಪ್ರಕರಣಕ್ಕೆ ಮಾರಕವಾಗಿರುತ್ತದೆ.

27. ಪ್ರಾಸಾ 4 ರವರು ಪಿರ್ಯಾದುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪಂಚರಾದ ಚಾಸಾ 2 ಮತ್ತು ಚಾಸಾ 3 ಅಂದರೆ (ಪ್ರಾಸಾ9 ಮತ್ತು 10) ರವರ ಸಮಕ್ಷಮ ಗಣೇಶ್ ಜ್ಯುವೆಲ್ಲರ್ಸ್ ನಲ್ಲಿ ಒಬ್ಬ ವ್ಯಕ್ತಿಯನ್ನು ವಿಚಾರಣೆ ಮಾಡಿ ಪರಿಶೀಲಿಸಿ ಆತನ ಬಳಿ ಇದ್ದ ಅರ್ಧ ತುಂಡಾದ ಚಿನ್ನದ ಸರ ಮತ್ತು ಮೊಬೈಲ್ ಅನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದಾಗಿ ತಿಳಿಸಿದ್ದು, ಆದರೆ ಪ್ರಾಸಾ 9 ಮತ್ತು 10 ಅಮಾನತ್ತು ಪಂಚನಾಮೆದಾರರು ತಮ್ಮನ್ನು ಪೊಲೀಸರು ಪಂಚನಾಗುವಂತೆ ಕೇಳಿಕೊಂಡಿಲ್ಲ, ತಮ್ಮ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ, ಮಹಜರಿನಲ್ಲಿ ಏನು ಬರೆದಿದೆ ತಮಗೆ ಗೊತ್ತಿಲ್ಲ, ತಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ, ನಿಪಿ2 ಪಂಚನಾಮೆಗೆ ಯಾವ ಕಾರಣಕ್ಕಾಗಿ ಸಹಿಯನ್ನು ಪಡೆದುಕೊಂಡಿರುತ್ತಾರೆ ತಮಗೆ ಗೊತ್ತಿಲ್ಲ ಎಂದು ಸಾಕ್ಷ್ಯ

ನುಡಿದಿರುವುದರಿಂದ ಸದರಿ ಘಟನೆಯಲ್ಲಿ ನಡೆದ ಅಮಾನತ್ತು ಪಂಚನಾಮೆಯನ್ನು ರುಜುವಾತುಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

28. ಮುಂದುವರೆದು ಪ್ರಾಸಾ 8 ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನನ್ನು ಪೋಲಿಸರು ಪಂಚನಾಗುವಂತೆ ಕೇಳಿಕೊಂಡಿಲ್ಲ. ತನ್ನ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ, ಮಹಜರಿನಲ್ಲಿ ಏನೂ ಬರೆದಿದೆ ತನಗೆ ಗೊತ್ತಿಲ್ಲ, ನಿಪಿ 1 ಮಹಜರಿನಲ್ಲಿರುವ ಸಹಿಯನ್ನು ಸುಮಾರು 15 ವರ್ಷಗಳ ಹಿಂದೆ ಪೋಲಿಸರು ತನ್ನ ಸಹಿ ಪಡೆದಿದ್ದು, ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವುದರಿಂದ ಸ್ಥಳ ಪಂಚನಾಮೆ ಸಾಕ್ಷಿದಾರರ ಸಾಕ್ಷ್ಯವು ಯಾವುದೇ ರೀತಿಯಲ್ಲೂ ಸಹಕಾರಿಯಾಗಿರುವುದಿಲ್ಲ.

29. ಪ್ರಾಸಾ 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ 7 ಮತ್ತು 8 (ಪ್ರಾಸಾ 1 ಮತ್ತು ಪ್ರಾಸಾ 2) ರವರು ಪೊಲೀಸ್ ಠಾಣೆಯಲ್ಲಿ ಆರೋಪಿಯನ್ನು ಗುರುತಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಪ್ರಾಸಾ 1 ಮತು 2 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಪ್ರಾಸಾ 6 ರವರು ಹೇಳಿ ಕೇಳಿ ಸಾಕ್ಷಿದಾರರಾಗಿದ್ದು ಇವರು ಸಹ ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

30. ಇನ್ನು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ದರೋಡೆ ಪ್ರಕರಣಗಳಲ್ಲಿ, ದರೋಡೆ ಆದ ವಸ್ತುಗಳನ್ನು ಆರೋಪಿಯ ಸ್ವಾಧೀನದಿಂದ ಅಮಾನತ್ತು ಪಂಚನಾಮೆ ಮೂಲಕ

ವಶಪಡಿಸಿಕೊಂಡ ಬಗ್ಗೆ ಹಾಗೂ ಅಮಾನತ್ತು ಪಂಚನಾಮೆ ಸಾಕ್ಷಿಗಳು ಬಹುಮುಖ್ಯವಾದ ಪಾತ್ರ ವಹಿಸುತ್ತವೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಆರೋಪಿ ಕಡೆಯಿಂದ ವಶಪಡಿಸಿಕೊಳ್ಳುವ ಸಮಯದಲ್ಲಿ ಹಾಜರಿದ್ದ ಅಮಾನತ್ತು ಪಂಚನಾಮೆಯ ಸಾಕ್ಷಿದಾರರು ವ್ಯತೀರಿಕ್ತ ಸಾಕ್ಷಿಯನ್ನು ಗಮನಿಸಿದಾಗ ಅಮಾನತ್ತು ಪಂಚನಾಮೆಯನ್ನು ಸ್ಥಳದಲ್ಲಿ ಜರುಗಿಸಿ ಆರೋಪಿ ಕಡೆಯಿಂದ ಆಭರಣ ವಶಪಡಿಸಿಕೊಂಡ ಬಗ್ಗೆ ಸಂಶಯ ಮೂಡುತ್ತದೆ.

31. ಈ ಪ್ರಕರಣದ ತನಿಖಾಧಿಕಾರಿಯಾದ ಪ್ರಾಸಾ3, ಪ್ರಾಸಾ 5, ಪ್ರಾಸಾ 7 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದರೂ ಸಹ ಅವರು ಇಲಾಖಾ ಸಾಕ್ಷಿದಾರರಾಗಿದ್ದು ಪ್ರಾಸಾ1, 2 ಆರೋಪಿಯನ್ನು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆ ಸಹ ಸಂಶಯಾತೀತವಾಗಿ ರುಜುವಾತಾಗಿರುವುದಿಲ್ಲ. ಸದರಿ ಸಂಶಯದ ಅನುಕೂಲತೆಯನ್ನು ಆರೋಪಿಯ ಪರ ತಾಳುವುದು ಸೂಕ್ತ ಎಂದು ಪರಿಗಣಿಸಬೇಕಾಗುತ್ತದೆ. ಅಭಿಯೋಜನೆ ಪಕ್ಷದವರು ಮಾಡಲಾದ ಯಾವುದೇ ದೋಷಾರೋಪಣೆಯನ್ನು ಸಮರ್ಪಕವಾಗಿ ಹಾಗೂ ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುವುದರಿಂದ ಆರೋಪಿತರ ಮೇಲೆ ಮಾಡಿದ ಆರೋಪಣೆಗಳಿಂದ ಮುಕ್ತಿಗೊಳಿಸಿ, ಬಿಡುಗಡೆಗೊಳಿಸಬೇಕಾಗುತ್ತೆಂದು ಅಭಿಪ್ರಾಯಪಟ್ಟು, ಈ ಮೇಲಿನ **1ನೇ ಅಂಶಗಳನ್ನು ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

32. **<u>ಅಂಶ-2</u>:** ಈ ಮೇಲ್ಕಂಡ ಕಾರಣಗಳಿಗಾಗಿ, ನ್ಯಾಯಾಲಯವು ಈ ಅಂಶವನ್ನು ಕೆಳಕಂಡಂತೆ ಆದೇಶ ಮಾಡಿರುತ್ತೇನೆಃ

**ಆದೇಶ**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಅಧಿಕಾರಯುಕ್ತನಾಗಿ 1ನೇ ಆರೋಪಿತನನ್ನು ಭಾರತೀಯ ದಂಡ ಸಂಹಿತೆಯ ಕಲಂ.392ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷ ಮುಕ್ತಗೊಳಿಸಿರುತ್ತೇನೆ.**

**ಆರೋಪಿಯ ಜಾಮೀನು ಮುಚ್ಚಳಿಕೆಯನ್ನು ಮತ್ತು ಅವರ ಜಾಮೀನುದಾರ ಜಾಮೀನು ಮುಚ್ಚಳಿಕೆಯನ್ನು ಅಪೀಲು ಅವಧಿ ಮುಗಿದ ನಂತರ ರದ್ದುಗೊಳಿಸತಕ್ಕದ್ದು.**

**3ನೇ ಆರೋಪಿಯನ್ನು ಸಿಸಿ ನಂ.4296/2026 ಗೆ ಮತ್ತು 4ನೇ ಆರೋಪಿಯನ್ನು ಸಿಸಿ ನಂ.4297/2026 ಗೆ ಈ ಪ್ರಕರಣದಿಂದ ಬೇರ್ಪಡಿಸಲಾಗಿದ್ದು, ಸದರಿ ಮೂಲ ಕಡತವನ್ನು ಮೇಲ್ಕಂಡ ಪ್ರಕರಣಗಳೊಂದಿಗೆ ಸಂರಕ್ಷಿಸಿಡಲು ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರಕ್ಕೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ, ನಾನು ಪರಿಶೀಲಿಸಿದ ನಂತರ ಅಚ್ಚು ತೆಗೆದು, ನನ್ನ ಸಹಿಯೊಂದಿಗೆ ದಿನಾಂಕಃ 6ನೇ ಜುಲೈ, 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

**(ಶ್ರೀ ಸಿದ್ದನಗೌಡ ಪಾಟೀಲ್ ಟಿ.)**
1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶಿವಮೊಗ್ಗ.

**<u>ಅನುಬಂಧ</u>**

**<u>ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿಃ</u>**

ಪ್ರಾಸಾ 1 : ಶ್ರೀಮತಿ ಗಿರಿಜಮ್ಮ

ಪ್ರಾಸಾ 2 : ಸವಿತ

ಪ್ರಾಸಾ 3 : ಲಕ್ಷ್ಮೀಶ

ಪ್ರಾಸಾ 4 : ಶಣ್ಮುಗಮ್ ಎಂ.

ಪ್ರಾಸಾ 5 : ಶಿವಮೂರ್ತಿ

ಪ್ರಾಸಾ 6 : ಸನಾವುಲ್ಲಾ

ಪ್ರಾಸಾ 7 : ಮಂಜುನಾಥ ಎಸ್.ಎನ್.

ಪ್ರಾಸಾ 8 : ವಿರುಪಾಕ್ಷಪ್ಪ

ಪ್ರಾಸಾ 9 : ಲೋಹಿತ್

ಪ್ರಾಸಾ 10 : ಉಮೇಶ್

**<u>ಆರೋಪಿತನ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿಃ</u>**

- ಇಲ್ಲ -

**<u>ಅಭಿಯೋಜನೆಯ ಪರವಾಗಿ ನಿಶಾನೆಯಾಗಿ ಗುರುತು ಮಾಡಿಕೊಂಡ ದಾಖಲೆಗಳ ಪಟ್ಟಿಃ</u>**

ನಿಪಿ.1 : ಸ್ಥಳ ಪಂಚನಾಮೆ

ನಿಪಿ-1(ಎ) ಮತ್ತು (ಬಿ): ಸಹಿಗಳು

ನಿಪಿ-2 : ಅಮಾನತ್ತು ಪಂಚನಾಮೆ

ನಿಪಿ-2(ಎ) ರಿಂದ (ಡಿ) : ಸಹಿಗಳು

ನಿ.ಪಿ.3 : ಸ್ವದೂರು

ನಿಪಿ-3(ಎ) : ಸಹಿ

| | | |
|---|---|---|
| ನಿ.ಪಿ.4 | : | ಸ್ಥಳ ಪಂಚನಾಮೆ |
| ನಿಪಿ-4(ಎ) ರಿಂದ (ಸಿ) | : | ಸಹಿಗಳು |
| ನಿ.ಪಿ.5 | : | ಪ್ರಥಮ ವರ್ತಮಾನ ವರದಿ |
| ನಿಪಿ-5(ಎ) | : | ಸಹಿ |
| ನಿ.ಪಿ.6 | : | ಭಾವಚಿತ್ರ |
| ನಿ.ಪಿ.7 | : | ಪ್ರಾಸಾ 6 ರವರ ಹೇಳಿಕೆ |
| ನಿ.ಪಿ.8 | : | ನಿವೇದನೆ |

**ಆರೋಪಿತನ ಪರವಾಗಿ ನಿಶಾನೆಯಾಗಿ ಗುರುತು ಮಾಡಿಕೊಂಡ ದಾಖಲೆಗಳ ಪಟ್ಟಿಃ** -

-ಇಲ್ಲ-

**ಅಭಿಯೋಜನೆಯ ಪರವಾಗಿ ಗುರುತು ಮಾಡಿಕೊಂಡ ಮುದ್ದೆಮಾಲುಗಳ ಪಟ್ಟಿಃ**

-ಇಲ್ಲ-

SIDDANAGOUDAPATIL T

Digitally signed by SIDDANAGOUDAPATIL T
Date: 2026.07.07 16:36:28 +0530

1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಶಿವಮೊಗ್ಗ.